ಶಿ) ಗ್ರಾಮಮಟ್ಟದ ಪ್ರಾಥಮಿಕ ಸಹಕಾರ ಸಂಘಗಳ ವಾರ್ಷಿಕ ಮಹಾ ಸಭೆ ಮತ್ತು ಚುನಾವಣೆಯನ್ನು ಬರುವ ಡಿಸೆಂಬರ್ ತಿಂಗಳವರೆಗೆ ಮುಂದೂಡುವಂತೆ ಆಗ ಹ

ಉಪಾಧ್ಯಕ್ಷರು.— ಶ್ರೀ ಕೆ. ಲಕ್ಕಪ್ಪನವರು.

(ಮಾನ್ಯ ಸದಸ್ಯರು ಕೆ. ಲಕ್ಕಪ್ಪನವರು ಗೈರು ಹಾಜರಾಗಿದ್ದರು.)

ಶ್ರೀ ಜಿ. ಎಸ್. ಆಚಾರ್. (ಬೈಂದೂರು).— ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಗ್ರಾಮ ಮಟ್ಟದ ಪ್ರಾಥಮಿಕ ಸಹಕಾರಿ ಸಂಘಗಳ ವಾರ್ಷಿಕ ಮಹಾಸಭೆ ಮತ್ತು ಚುನಾವಣೆ ಇದೇ ಜೂನ್ ತಿಂಗಳ ಅಂತ್ಯದೊಳಗೆ ತಾಲ್ಲೂಕು ಮಟ್ಟದ ಸಂಘಗಳ ಮಹಾಸಭೆ ಮತ್ತು ಚುನಾವಣೆ ಜುಲೈಯ ಅಂತ್ಯದೊಳಗೆ, ಜಿಲ್ಲಾ ಮಟ್ಟದ ಸಂಘಗಳದ್ದು ಆಗಸ್ಟ್ ಅಂತ್ಯದೊಳಗೆ ಹಾಗೂ ರಾಜ್ಯಮಟ್ಟದ್ದು ಸೆಪ್ಟೆಂಬರ್ ಅಂತ್ಯದೊಳಗೆ ಆಗಬೇಕೆಂದು ಇತ್ತೀಚೆಗೆ ಸರ್ಕಾರಿ ಆಜ್ಞೆ ಆಗಿದೆ. ಜೂನ್ ಜುಲೈ ತಿಂಗಳಲ್ಲಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ವಿಪರೀತ ಮಳೆ ಇದ್ದು, ಬಹುತೇಕ ಸದಸ್ಯರು ಕೃಷಿ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಹಾಗಾಗಿ ಮಹಾಸಭೆ ಮತ್ತು ಚುನಾವಣೆಯಲ್ಲಿ ಸದಸ್ಯರು ಆಸಕ್ತಿ ವಹಿಸುವುದಿಲ್ಲ ಸಾಲ ಮನ್ನಾ ಕುರಿತಾದ ಧೋರಣೆ ಇನ್ನೂ ಶೀರ್ಮಾನ ಆಗದ ಪ್ರಯುಕ್ತ ಚುನಾಯಿತರಾದವರು ಸಹಾ ಸ್ಥಾನ ಕಳೆದುಕೊಳ್ಳುವ ಸಂಭವ ಇದೆ. ನೂರಾರು ಶಾಸಕರು ಹಾಗೂ ಸಹಸ್ರಾರು ಸಹಕಾರಿ ಸಂಘ ಸಂಸ್ಥೆಗಳು ಈಗಾಗಲೇ ಚುನಾವಣೆಯನ್ನು ಮುಂದುವರಿಸಲು ಸರಕಾರವನ್ನು ಒತ್ತಾಯಿಸಿರುವುದರಿಂದ, ಮಹಾಸಭೆ ಮತ್ತು ಚುನಾವಣೆಗಳನ್ನು ಬರುವ ಡಿಸೆಂಬರ್ ಅಂತ್ಯದವರೆಗೆ ಮುಂದೂಡ ಬೇಕೆಂದು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಇದಕ್ಕೆ ಉತ್ತರವನ್ನು ಈ ಸದನ ಮುಗಿಯುವುದರ ಮೊದಲು ಕೊಡುತ್ತಾರೆ. ಏಕೆಂದರೆ ಈ ಬಗ್ಗೆ ಸರ್ಕಾರಕ್ಕೆ ಅನೇಕ ಶಾಸಕರುಗಳು ಮನವಿಯನ್ನು ಕೊಟ್ಟಿದ್ದಾರೆ. ಅನೇಕ ಸಾವಿರಾರು ಅರ್ಜಿಗಳು ಬೇರೆ ಬೇರೆ ಸೊಸೈಟಿಗಳಿಂದ ಸರ್ಕಾರಕ್ಕೆ ಬಂದಿದೆ. ಅದಕ್ಕೆ ಈ ಸದನ ಏಳುವ ಮೊದಲು ಇದಕ್ಕೆ ಒಂದು ಉತ್ತರವನ್ನು ಸಹಕಾರಿ ಸಚಿವರು ಕೊಡುತ್ತಾರೆ.

ಉಪಾಧ್ಯಕ್ಷರು.— ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದುವರಿಸಬಹುದು. ಇವತ್ತು ಐದು ಗಂಟೆಗೆ ನಾವು ಈ ಚರ್ಚೆಯನ್ನು ಮುಗಿಸಿದ ಮೇಲೆ ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಆದಷ್ಟು ೧೫ ನಿಮಿಷ ಅಥವಾ ೨೦ ನಿಮಿಷದ ಒಳಗೆ ತಮ್ಮ ಒಂದು ವಿಷಯಗಳನ್ನು ಹೇಳಲಿಕ್ಕೆ ಪ್ರಯತ್ನವನ್ನು ಮಾಡಬೇಕು ಎಂದು ಹೇಳುತ್ತೇನೆ. ಈಗ ಶ್ರೀಯುತ ವಾಟಾಳ್ ನಾಗರಾಜ್‌ರವರು ತಮ್ಮ ಚರ್ಚೆಯನ್ನು ಮುಂದುವರೆಸಬಹುದು.

## ವಿತ್ತೀಯ ಕಾರ್ಯ ಕಲಾಪಗಳು

## ೧೯೯೦–೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಒಂದು ಬೇಡಿಕೆಗಳ ಬಗ್ಗೆ ಮಾತನಾಡುವಾಗ ಇಷ್ಟೊಂದು ಬೇಡಿಕೆಗಳನ್ನು ಒಂದೇಸಾರಿ ತಂದಿಟ್ಟು ೧–೨ ದಿವಸದಲ್ಲಿ ಈ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯಬೇಕೆನ್ನುತಕ್ಕದ್ದು ನಮ್ಮ ದೃಷ್ಟಿಯಲ್ಲಿ ಸರಿಯಿಲ್ಲ. ಒಂದೊಂದು ಇಲಾಖೆಯ ಬೇಡಿಕೆಯನ್ನು ಕನಿಷ್ಟ ೩–೪ ದಿವಸದ ಮಟ್ಟಿಗಾದರೂ ಮಾಡಿದರೆ ಸಮಗ್ರವಾಗಿ ಎಲ್ಲಾ ಇಲಾಖೆಗಳ ಬಗ್ಗೆಯೂ ಬೆಳಕನ್ನು ಚೆಲ್ಲುವುದಕ್ಕೆ ಅನುಕೂಲವಾಗುತ್ತದೆ. ಒಟ್ಟೊಟ್ಟಿಗೆ ೫–೬ ಇಲಾಖೆಗಳನ್ನು ಸೇರಿಸುವುದರಿಂದ ಯಾವ ಇಲಾಖೆಯ ಬಗ್ಗೆ ಮಾತನಾಡಬೇಕು ಹಾಗೂ ಯಾವುದನ್ನು ಬೀಡಬೇಕೆನ್ನುವ ಪ್ರಶ್ನೆ ಬರುತ್ತದೆ. ಆದರೂ ತಮಗೆ ನಾನು ಮನವಿ ಸಲ್ಲಿಸಿದ್ದೇನೆ. ದಯಮಾಡಿ ಆದಷ್ಟು ಯಾವ ರೀತಿ ತೀರ್ಮಾನ ಮಾಡುತ್ತೀರಿ ಎಂಬುದು ತಮಗೆ ಬಿಟ್ಟದ್ದು. ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ನಾವು ಇವತ್ತು ಪ್ರಧಾನಮಂತ್ರಿಗಳವರು ಮುಖ್ಯ ಮಂತ್ರಿಗಳ ಸಭೆಯಲ್ಲಿ ಆಶಾದಾಯಕ ವಾದ ಕೆಲವು ಮಾತುಗಳನ್ನಾಡಿದ್ದಾರೆ. ಅದನ್ನು ನಾನಾದರೂ ಈ ಸಭೆಯಲ್ಲಿ ಸ್ವಾಗತಿಸುತ್ತೇನೆ. ಸ್ಥಳೀಯ ಸಂಸ್ಥೆಗಳು ಪ್ರಜಾಪ್ರಭುತ್ವದ ಒಂದು ತಳಹದಿ. ಆ ಸ್ಥಳೀಯ ಸಂಸ್ಥೆಗಳ ತಳಹದಿ ಉಳಿಯಬೇಕಾದರೆ ಆ ಸಂಸ್ಥೆಗಳಿಗೆ ಸಮಗ್ರವಾದಂತಹ ಅಧಿಕಾರವನ್ನು ನೀಡಬೇಕು. ಸಮಗ್ರವಾಗಿ ಮುಕ್ತ ಚುನಾವಣೆ ನಡೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಸ್ಥಳೀಯ ಸಂಸ್ಥೆಗಳಾಗಲಿ, ಪುರಸಭೆಗಳಾಗಲಿ, ನಗರದ ಮಹಾನಗರಪಾಲಿಕೆಗಳಾಗಲಿ, ಈ ಚುನಾವಣೆಯ ವ್ಯವಸ್ಥೆಯನ್ನು ರಾಜ್ಯ